# ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

# Krishna Bhagya Jala Nigam Limited

(A Government of Karnataka Undertaking)

**ನಮ್ಮ ಬಗ್ಗೆ** **ಕಂಪನಿಯ ಹಿನ್ನೆಲೆ**

## ಕಂಪನಿಯ ಹಿನ್ನೆಲೆ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು (ಕೃಭಾಜನಿನಿ) 1994ರಲ್ಲಿ ಕಂಪನಿ ಕಾಯ್ದೆ 1956ರಡಿ ಕರ್ನಾಟಕ ರಾಜ್ಯದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸ್ಥಾಪಿಸಲ್ಪಟ್ಟಿದ್ದು, ಕರ್ನಾಟಕ ಸರ್ಕಾರದ ಏಕ ಸ್ವಾಮ್ಯದ ನಿಗಮವಾಗಿದೆ. ಈ ಕಂಪನಿಯು ಕೃಷ್ಣಾ ಮೇಲ್ದಂಡೆ ಯೋಜನೆ ಅಡಿ ಬರುವ ಎಲ್ಲಾ ನೀರಾವರಿ ಯೋಜನೆಗಳನ್ನು ಯೋಜಿಸಿ, ಅನುಷ್ಠಾನಗೊಳಿಸಿ ಪಾಲನೆ ಮತ್ತು ಪೋಷಣೆ ಮಾಡುವ ಜವಾಬ್ದಾರಿಯನ್ನ ಹೊತ್ತಿದೆ. ಕಂಪನಿಯು ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಕಂಪನಿಗೆ ಯೋಜನಾ ಭಾದಿತ ಪುನರ್ವಸತಿ ಮತ್ತು ಪುನರ್ನಿರ್ಮಾಣದ ಜವಾಬ್ದಾರಿಯನ್ನು ಕೂಡ ವಹಿಸಿ ಕೊಡಲಾಗಿದೆ.

ಅನಾದಿ ಕಾಲದಿಂದಲೂ ನದಿಗಳು ನೀರಿನ ಮುಖ್ಯ ಮೂಲವಾಗಿದ್ದು, ಅದರ ಸುತ್ತಲೂ ನಾಗರೀಕತೆಯು ಅರಳಿದೆ. ಮಾನವನು ನದಿಗಳ ಅಗಾಧ ಜಲ ಸಂಪತ್ತನ್ನು ಕೃಷಿಗಲ್ಲದೆ ಕುಡಿಯುವ, ತೊಳೆಯಲು ಮತ್ತು ಸಂಚಾರ ಮೊದಲಾದವುಗಳಿಗಾಗಿ ಉಪಯೋಗಿಸುತ್ತಾ ಬಂದಿದ್ದಾನೆ. ಈ ವಿಕಾಸದೊಂದಿಗೆ ನಾಗರೀಕತೆಯು ವಾಣಿಜ್ಯ ಮತ್ತು ವ್ಯವಹಾರಗಳೂ ಕೂಡಾ ನೀರಾವರಿಯ ಸುತ್ತ ವಿಕಸಿತಗೊಂಡಿವೆ.

ನಮ್ಮ ಪೂರ್ವಜರು ನದಿಗಳ ಪವಿತ್ರತೆಯನ್ನು ಆಧರಿಸಿ ಅವುಗಳನ್ನು ದೇವತೆಗಳೆಂದು ಪೂಜಿಸುತ್ತಿದ್ದರು. ನಮ್ಮ ದೇಶವು ಜಲಸಂಪತ್ತಿನಿಂದ ಆಶೀರ್ವದಿಸಲ್ಪಟ್ಟಿದ್ದು, ಇವುಗಳಲ್ಲಿ ಗಂಗಾ, ಸಿಂಧು, ನರ್ಮದಾ, ಗೋದಾವರಿ, ಕೃಷ್ಣೆ ಮತ್ತು ಕಾವೇರಿ ನದಿಗಳನ್ನು ಸ್ಮರಿಸಬಹುದಾಗಿದೆ. ಸಿಂಧು ನದಿಯಿಂದ ನಮ್ಮ ಹಿಂದೂ ನಾಗರೀಕತೆಯ ಹೆಸರು ಪಡೆದುಕೊಂಡಂತೆಯೆ ನೈಲ್ ನೈದಿಯ ಸುತ್ತಲೂ ಈಜಿಪ್ಟ್ ದೇಶದ ವಿಕಾಸವನ್ನು ಕೆಲವು ಉದಾಹರಣೆಗಳಾಗಿ ಇಲ್ಲಿ ಸ್ಮರಿಸಬಹುದು. ನದಿಗಳು ಒಂದು ಸಂಸ್ಕೃತಿಯ ಜೀವರೇಖೆಯಾಗಿದ್ದು, ಕೃಷ್ಣಾ ನದಿಯು ಉತ್ತರ ಕರ್ನಾಟಕದ ಜೀವ ರೇಖೆಯಾಗಿದೆ. ಕಂಪನಿಗೆ ವ್ಯಕ್ತಿಗಳಿಂದ, ರೈತರ ಸಂಘಗಳಿಂದ, ಪಟ್ಟಣಗಳು, ನಗರಗಳ ಮುನಿಸಿಪಾಲಿಟಿ ಮತ್ತು ಕೈಗಾರಿಕೆಗಳ ಮೇಲೆ ನೀರಿನ ಕರ ವಿಧಿಸಿ ವಸೂಲು ಮಾಡಲು ಅನುಮೋದನೆ ಪಡೆದಿದೆ.

ಕರ್ನಾಟಕದ ಹೆಚ್ಚು ಪ್ರದೇಶಗಳು ಬರಪೀಡಿತ ಮಳೆ ನೆರಳಿನ, ಪಶ್ಚಿಮ ಘಟ್ಟದ ಅತೀ ಕಡಿಮೆ ಮಳೆ ಪ್ರದೇಶದಲ್ಲಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯು ಬರಪೀಡಿತ ಉತ್ತರ ಕರ್ನಾಟಕದ ಗುಲಬರ್ಗಾ, ರಾಯಚೂರು, ಬಾಗಲಕೋಟೆ ಮತ್ತು ಬಿಜಾಪೂರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲ್ಪಡುತ್ತಿದ್ದು, ಯೋಜನೆಯು ಕೃಷ್ಣಾ ಮತ್ತು ಭೀಮಾ ನದಿಯ ಮಧ್ಯದ ಒಂದು ತ್ರಿಕೋನಾಕಾರವನ್ನು ವ್ಯಾಪಿಸಿದೆ. ಈ ಭಾಗದ ಜನರು ಮುಖ್ಯವಾಗಿ ಒಕ್ಕಲುತನವನ್ನು ಅವಲಂಭಿಸಿದ್ದು, ಈ ಭಾಗವು ಮಳೆಯ ಚಾಂಚಲ್ಯತೆಯನನ್ನುಭವಿಸುತ್ತಿದ್ದರೂ ಕೂಡಾ ಅತ್ಯಂತ ಫಲವತ್ತಾಗಿದ್ದು, ನೀರಾವರಿಗೆ ಒಳಪಡಿಸಿದರೆ ಈ ಭಾಗದಲಷ್ಟೇ ಅಲ್ಲದೆ ಕರ್ನಾಟಕ ರಾಜ್ಯದ ಆರ್ಥಿಕ ಚಿತ್ರವೇ ಬದಲಾಗುತ್ತದೆ.

## ಕೃಷ್ಣಾ ನ್ಯಾಯಾಧೀಕರಣದ ತೀರ್ಪಿನಂತೆ ನೀರಿನ ಹಂಚಿಕೆ

ಕೃಷ್ಣಾ ಜಲ ವಿವಾದದ ನ್ಯಾಯಾಧೀಕರಣವು 75 ಪ್ರತಿಶತ ನೀರಿನ ಲಭ್ಯತೆಯ ಆಧಾರದಲ್ಲಿ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಿಗೆ ನೀರಿನ ಹಂಚಿಕೆ ಮಾಡಿತು. ಸ್ಕೀಂ 'ಎ' ನಡಿ ಮೂರು ರಾಜ್ಯಗಳಿಗೆ ಒಟ್ಟು 2060 ಟಿಎಂಸಿ ನೀರಿನ ಲಭ್ಯತೆ ಇದೆ ಎಂದು ನಿರ್ಧರಿಸಿ ಈ ಕೆಳಕಂಡಂತೆ ಹಂಚಿಕೆ ಮಾಡಿದೆ.

1) ಮಹಾರಾಷ್ಟ್ರ – 560 ಟಿ.ಎಂ.ಸಿ.

2) ಕರ್ನಾಟಕ – 700 ಟಿ.ಎಂ.ಸಿ.

3) ಆಂಧ್ರಪ್ರದೇಶ – 800 ಟಿ.ಎಂ.ಸಿ.

ರಿಜನರೇಷನ್ ಸೇರಿದಂತೆ ಕರ್ನಾಟಕಕ್ಕೆ ಒಟ್ಟಾರೆ 734 ಟಿ.ಎಂ.ಸಿ. ಲಭ್ಯವಿದ್ದು, ಇದರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಕರ್ನಾಟಕ ಸರ್ಕಾರವು 173 ಟಿ.ಎಂ.ಸಿ. ನೀರಿನ ಹಂಚಿಕೆಯನ್ನು ನಿರ್ಧರಿಸಿದೆ.

ಕೃಷ್ಣಾ ನದಿ

ಕೃಷ್ಣಾ ನದಿಯು ಮಹಾರಾಷ್ಟ್ರ ರಾಜ್ಯದ ಪಶ್ಚಿಮ ಘಟ್ಟದಲ್ಲಿ ಉಗಮಿಸಿ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ.

ಆರ್ಥಿಕ ವಿವರಗಳು:

ಅನುದಾನ

ಖರ್ಚಿನ ವಿವರಗಳು

ಯೋಜನೆಯ ಕೆಲಸಗಳ ವಿವರಗಳು

ಚಿತ್ರಶಾಲೆ

ಮಾಹಿತಿಹಕ್ಕು

ಸರ್ಕಾರದ ಆದೇಶಗಳು ಮತ್ತು ನೋಟಿಫಿಕೇಶನ್‌ಗಳು

ಸಂಬಂಧಪಟ್ಟ ಸ್ಥಳಗಳು

ಭಾರತದ ನದಿಗಳ ನಕ್ಷೆ

ಜಲಸಂಪನ್ಮೂಲ ಮಂತ್ರಾಲಯ

ಜ.ಸಂ.ಇ.

ಕೆ.ಬಿ.ಜೆ.ಎನ್.ಎಲ್.ನ ಸಾಂಸ್ಥಿಕ ನಕ್ಷೆ

ಕೆ.ಬಿ.ಜೆ.ಎನ್.ಎಲ್.ನ ನೌಕರರ ವಿವರಗಳು

ಅನುಪಯುಕ್ತ ವಾಹನಗಳು ಮತ್ತು ಯಂತ್ರಗಳ ಮಾರಾಟ